ಇದನ್ನು ಚುರುಕುಗೊಳಿಸಬೇಕು. ಇಂಡಿವಿಜ್ಯುಯಲ್ ಆಗಿ ಬಂದರೂ ಸಹ ಇದನ್ನು ಹಾನರ್ ಮಾಡುವಂತಹ ಆದೇಶವನ್ನು ನೀವು ಕೊಡಬೇಕೆನ್ನುವಂಥಾದ್ದು ಮತ್ತು ಕನ್ಸಾಲಿಡೇಟ್ ಆಗಿ ಒಂದೇ ಸಾರಿ ಕೊಡಿ ಎಂದರೆ ಹೇಗೆ ಸಾಧ್ಯವಾಗುತ್ತದೆ. ಆದುದರಿಂದ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ಅದೇ ರೀತಿಯಲ್ಲಿ ಗೊಲ್ಲರ ಹಟ್ಟಿಯಲ್ಲಿ ಇವತ್ತು ಒಂದು ಸೈಟ್ ಕೊಡುವುದಕ್ಕಾಗುವುದಿಲ್ಲ ತಾಂಡಗಳಲ್ಲಿಯೂ ಕೊಡುವುದಕ್ಕಾಗುವುದಿಲ್ಲ, ಹ್ಯಾಮ್‌ಲೆಟ್‌ಗಳಲ್ಲಿ ಮೊದಲೇ ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ದಯಮಾಡಿ ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ತುಮಕೂರಿನ ಪರವಾಗಿ ವಹಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ ಸಿ. ಜಿಗಜಿಣಗಿ: ತುಮಕೂರು ಜಿಲ್ಲೆಯ ಮಾಹಿತಿಯನ್ನು ತರಿಸಿ ಮಾಡಿಸಿ ಕೊಡುತ್ತೇನೆ.

ಉಡುಪಿಯಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್. ಸ್ಟಾ ್ಯಂಡ್

111 (918) ಶ್ರೀ.ಯು.ಆರ್. ಸಭಾಪತಿ (ಉಡುಪಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯಲ್ಲಿ ಕೆ.ಎಸ್.ಆರ್.ಟಿ.ಸಿ ಸ್ವಂತ ಬಸ್ ಸ್ಟಾ ್ಯಂಡ್ ಇಲ್ಲದಿರುವುದರಿಂದ ಅದರ ನಿರ್ಮಾಣಕ್ಕೆ ಖಾಸಗಿಯವರಿಂದ ಜಾಗವನ್ನು ತೆಗೆದುಕೊಳ್ಳುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು)?

ಆ) ಸ್ವಂತ ಬಸ್ ಸ್ಟಾ ್ಯಂಡಿನ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ವಿವರ ನೀಡುವುದು)?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಉಡುಪಿಯಲ್ಲಿ ಯಾವ ಖಾಸಗೀ ನಿವೇಶನವೂ ಸಮಾಧಾನಕರ ಬೆಲೆಗ ಲಭ್ಯವಿಲ್ಲದ ಕಾರಣ ಕ.ರಾ.ರ.ಸಾ. ಸಂಸ್ಥೆಗೆಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸಧ್ಯಕ್ಕೆ ಸಾಧ್ಯವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಯು.ಆರ್. ಸಭಾಪತಿ: ಮಾನ್ಯ ಅಧ್ಯಕ್ಷರೆ, ನಾನು ಕಲೆದ ಅಧಿವೇಶನದಲ್ಲಿ ಉಡುಪಿ ಕ್ಷೇತ್ರದಲ್ಲಿ ಸುಮಾರು 15 ಲಕ್ಷದಿಂದ 20 ಲಕ್ಷದವರೆಗೆ ಯಾತ್ರಾರ್ಥಿಗಳು ಬರುವುದರಿಂದ ಅಲ್ಲಿಗೆ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟಾ ್ಯಂಡ್ ಅಗತ್ಯವಿದೆ ಎಂದು ಕೇಳಿದ್ದೆ. ಇದಕ್ಕಾಗಿ 1992ರ ಅಕ್ಟೋಬರ್‌ನಲ್ಲಿ 9 ಎಕರೆ ಜಮೀನನ್ನು ಸ್ವಾಧೀನ ಮಾಡಿಕೊಳ್ಳುವ ಬಗ್ಗೆ ಕೂಡ ಆದೇಶವಾಗಿತ್ತು. ಕೊನೆಯ ಗಳಿಗೆಯಲ್ಲಿ ಈ ಆದೇಶವನ್ನು ಸರ್ಕಾರ ರದ್ದು ಮಾಡಿತು. ಅದಕ್ಕಾಗಿ ನಾನು ಕರ್ನಾಟಕ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ಕೂಡ ತಂದಿದ್ದೆ. ಸರ್ಕಾರಕ್ಕೆ ಎರಡು ವರ್ಷಗಳಿಂದ ಜಾಗವನ್ನು ಹಾಗೆಯೆ ಸ್ವಾಧೀನಕ್ಕೆ ಉಳಿಸಿಕೊಂಡಿದ್ದೇವೆ. ಮಾನ್ಯ ಸಾರಿಗೆ ಸಚಿವರು ನಮಗೆ ಇದೇ ಅಧಿವೇಶನದಲ್ಲಿ ಪರಿಶೀಲನೆ ಮಾಡಿ, ಇದನ್ನು ಮಾಡೋಣವೆಂದು ಹೇಳಿದ್ದರು.

ಆದುದರಿಂದ ಈ ಜಾಗವನ್ನು ತಾವು ಪರಿಶೀಲನೆ ಮಾಡಬೇಕು. ಇದನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಕ್ಟೋಬರ್ 1997ರ ವರೆಗೆ ವಾಯಿದೆ ಇದೆ. ತಾವು ಇದನ್ನು ಸ್ವಾಧೀನ ಮಾಡಿಕೊಂಡರೆ, ಮುಂದೆ ಉಡುಪಿ ಕ್ಷೇತ್ರದಲ್ಲಿ ಒಂದು ದೊಡ್ಡ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಈ ಪ್ರಪೋಜಲ್ ಸಾರಿಗೆ ಸಂಸ್ಥೆಯ ಮುಂದೆ ಇಲ್ಲ. ಮಾನ್ಯ ಸಭಾಪತಿಯವರು ಪುನಃ ಈ ವಿಚಾರವನ್ನು ಹೇಳಿದ್ದಾರೆ. ನಾನು ಇದನ್ನು ಪುನಃ ಪರಿಶೀಲನೆ ಮಾಡುವಂತಹ ಭರವಸೆಯನ್ನು ಕೊಡುತ್ತೇನೆ.

ತಿರುಮಲ ತಿರುಪತಿ ದೇವಸ್ಥಾನದಲ್ಲಿ ಕರ್ನಾಟಕದ ಅತಿಥಿ ಗೃಹ

112 (953) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಮುಜರಾಯಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಿದ್ಧವಾದ ತಿರುಮಲ-ತಿರುಪತಿ ದೇವಸ್ಥಾನದಲ್ಲಿ ಕರ್ನಾಟಕಕ್ಕೆ ಸೇರಿದ ಅತಿಥಿ ಗೃಹಗಳು ಎಷ್ಟು?

ಆ) ಕರ್ನಾಟಕ ರಾಜ್ಯದಿಂದ ಹೋಗುತ್ತಿರುವ ಯಾತ್ರಾರ್ಥಿಗಳಿಗೆ ನೀಡುತ್ತಿರುವ ಸೌಲಭ್ಯಗಳೇನು.

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು):

ಅ) ಕರ್ನಾಟಕ ರಾಜ್ಯ ಛತ್ರ ತಿರುಮಲದಲ್ಲಿ ಈ ಕೆಳಕಂಡಂತೆ ವಸತಿ ಸೌಕರ್ಯವಿದೆ.

		ಕೊಠಡಿಗಳ ಸಂಖ್ಯೆ
1) ಅತಿಥಿಗೃಹ	-1	8
2) ನಿರೀಕ್ಷಣಾ ಭವನ	-1	2
3) ಕರ್ನಾಟಕ ಕಲ್ಯಾಣ ಮಂಡಪ	-1	24+1 ಕಲ್ಯಾಣ ಮಂಟಪ
4) ಕರ್ನಾಟಕ ಪ್ರವಾಸಿಸೌಧ	-1	88+1 "
5) ಕುಠೀರಗಳು	-17	48

ಅತಿಥಿಗೃಹದ 8 ಕೊಠಡಿಗಳು ಮತ್ತು ನಿರೀಕ್ಷಣಾ ಭವನದ 2 ಕೊಠಡಿಗಳನ್ನು ಹೊರತುಪಡಿಸಿ ಉಳಿದ ಕೊಠಡಿಗಳನ್ನು ದಾನ ಯೋಜನೆಯಿಂದ ನಿರ್ಮಿಸಲಾಗಿದೆ.

ಆ) ವಸತಿ ಸೌಲಭ್ಯ ಒದಗಿಸುವುದರ ಜೊತೆಗೆ ದರ್ಶನ ಹಾಗೂ ಪ್ರಸಾದದ ಬಗ್ಗೆ ತಿಳುವಳಿಕೆಯನ್ನು ನೀಡಲಾಗುತ್ತದೆ.